### ಅಲಂಕಾರಿಕ ಪುಷ್ಪ

# ಅಲ್ಪೀನಿಯ ಪರ್ಪುರಾಟ್ ಪಿಂಕ್

ಚಿತ್ರ – ಬರಹ:
ಗೀತಸದಾ ಮೋಂತಿಮಾರು

**ಪಿಂಕ್** ಮತ್ತು ಕೆಂಪು ಬಣ್ಣದ ಹೂವುಗಳನ್ನು ಗಿಡದ ಕೊನೆಯ ಹಂತದಲ್ಲಿ ಕೊನೆಯ ಸುಳಿಯಾಗಿ ಬಿಡುವ ಈ ಹೂವುಗಳು ಆಕರ್ಷಕ. ಮಧ್ಯದಲ್ಲಿ ಗಡುಸಾದ ಭಾಗ, ಸುತ್ತಲೂ ಸುಂದರ ಪಕಳೆಗಳನ್ನು ಹೊಂದಿರುವ ಈ ಹೂವಿನ ಹೆಸರು 'ಅಲ್ಪೀನೀಯ ಪರ್ಪುರಾಟಾ ಪಿಂಕ್ ಅಥವಾ ರೆಡ್.'

ಈ ಹೂವುಗಳು ವಿಶೇಷವಾದ ಹೊಳಪನ್ನು ಹೊಂದಿದ್ದು ತನ್ನ ಬಣ್ಣ ಮತ್ತು ಆಕರ್ಷಕ ವಿನ್ಯಾಸದಿಂದ ಎಂಥವರನ್ನೂ ತನ್ನತ್ತ ಸೆಳೆಯಬಲ್ಲದು. ದೀರ್ಘ ಬಾಳಿಕೆ, ಗಾತ್ರ ಮತ್ತು ಬಣ್ಣದಿಂದಾಗಿ ಅಲಂಕಾರಿಕ ಪುಷ್ಪಗಳಲ್ಲಿ ವಿಶೇಷ ಸ್ಥಾನವನ್ನು ಪಡೆದಿರುವ ಈ ಹೂವು ಹೆಲಿಕೋನಿಯಾ ಸಸ್ಯ ಜಾತಿಗೆ ಸೇರಿದೆ.

ಕರಾವಳಿ ಮತ್ತು ಮಲೆನಾಡಿನ ಹವಾಮಾನಕ್ಕೆ ಚೆನ್ನಾಗಿ ಹೊಂದಿಕೊಳ್ಳುವ, ನೋಡಲು ಶುಂಠಿ ಅಥವಾ ಬಾಳೆಗಿಡವನ್ನು ಹೋಲುವ ಈ ಹೂವಿನ ಗಿಡಗಳು ಶೇಕಡಾ 75ರಷ್ಟು ನೆರಳು ಮತ್ತು







ಶೇಕಡಾ 25ರಷ್ಟು ಬಿಸಿಲಿರುವ ಕಡೆಗಳಲ್ಲಿ ಚೆನ್ನಾಗಿ ಬೆಳೆಯಬಲ್ಲದು. ಉಷ್ಣವಲಯದಲ್ಲಿ ಬೆಳೆಯುವ ಗಿಡವಾದರೂ ಆಂಶಿಕ ಬಿಸಿಲಿರುವ ಅಡಿಕೆ ತೋಟದ ಒಳಗಡೆ ಚೆನ್ನಾಗಿ ಎತ್ತರವಾಗಿ ಬೆಳೆದು ಉತ್ತಮ ವರ್ಗದ ಹೂವುಗಳನ್ನು ನೀಡುತ್ತದೆ.

ನೀರು ಚೆನ್ನಾಗಿ ಬಸಿದು ಹೋಗುವಂತಹ ಸಡಿಲ ಮರಳು ಮಿಶ್ರಿತ

(8ನೇ ಪುಟ ನೋಡಿ)